

# ಬಕಾಸುರ ಬರುತ್ತಿದ್ದಾನೆ

ಆಧುನಿಕ ಕಾಲದ ‘ಬಕಾಸುರ’ ಸದ್ದು ಮಾಡುತ್ತಿದ್ದಾನೆ! ರೇಡಿಯೊ ಜಾಕಿ ರೋಹಿತ್ ಮತ್ತು ಹಿರಿಯನಟ ರವಿಚಂದ್ರನ್ – ಇವರಿಬ್ಬರಲ್ಲಿ ಬಕಾಸುರ ಯಾರು ಎನ್ನುವುದನ್ನು ತೆರೆಯ ಮೇಲೆಯೇ ಕಾಣಬೇಕು.

‘ಕರ್ವ’ ಚಿತ್ರದ ಖ್ಯಾತಿಯ ನವನೀತ್ ‘ಬಕಾಸುರ’ ಚಿತ್ರದ ನಿರ್ದೇಶಕರು. ಮಾನಸಿಕ ಸಂಘರ್ಷದ ಕಥೆಯ ಈ ಚಿತ್ರದ ತಮಗೆ ಬ್ರೇಕ್ ನೀಡಲಿದೆ ಎನ್ನುವುದು ಅವರ ವಿಶ್ವಾಸ. ರೋಹಿತ್ ನಾಯಕನ ಪಾತ್ರದಲ್ಲಿ ನಟಿಸಿದ್ದರೆ, ರವಿಚಂದ್ರನ್ ಖಳನಾಯಕನ ಪಾತ್ರದಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ಚಿತ್ರದಲ್ಲಿ ಅವರದು ಉದ್ಯಮಿಯ ಪಾತ್ರ. ಈ ಪಾತ್ರ ಸಿಕ್ಕಾಪಟ್ಟೆ ಸ್ಟೈಲಿಷ್ ಆಗಿದೆಯಂತೆ. ನವನೀತ್ ಹೇಳಿದ ಕಥೆಯಿಂದ ಪ್ರಭಾವಿತರಾದ ರವಿಚಂದ್ರನ್, ಬಕಾಸುರ ಎನ್ನುವ ಶೀರ್ಷಿಕೆಯನ್ನು ತಾವೇ ಸೂಚಿಸಿದರಂತೆ. ಹೊಸಬರನ್ನು ರವಿಚಂದ್ರನ್ ಉತ್ತೇಜಿಸುವ ರೀತಿ ನವನೀತ್ಗೆ ಇಷ್ಟವಾಗಿದೆ.

ಮಹಾಭಾರತದ ಬಕಾಸುರ ಹೊಟ್ಟೆಬಾಕನಾದ ರಕ್ಕಸನಾದರೆ, ಈ ಹೊತ್ತಿನ ವ್ಯಕ್ತಿ ದುಡ್ಡುಬಾಕನಾಗಿದ್ದಾನೆ. ಈ ತಲೆಮಾರಿನ ಹಣದ ಹಪಹಪಿಯನ್ನೇ ನವನೀತ್ ಚಿತ್ರದಲ್ಲಿ ನಿರೂಪಿಸಿದ್ದಾರಂತೆ. ಯುವಜನರಿಗೆ ಮಾತ್ರವಲ್ಲದೆ, ಕುಟುಂಬದ ಎಲ್ಲ ವರ್ಗದವರೂ ನೋಡಬಹುದಾದ ಚಿತ್ರ ತಮ್ಮದು ಎನ್ನುವ ವಿಶ್ವಾಸ ನಿರ್ದೇಶಕರದು.

ಕಾವ್ಯಾ ಗೌಡ ಚಿತ್ರದ ನಾಯಕಿ. ಕಿರುತೆರೆಯ ‘ಗಾಂಧಾರಿ’ ಧಾರಾವಾಹಿಯ ಜನಪ್ರಿಯತೆಯೇ ಬೆಳ್ಳಿತೆರೆ ಪ್ರವೇಶಕ್ಕೆ ಅವಕಾಶ ಕಲ್ಪಿಸಿದೆ. ಕನ್ನಡದ ಹುಡುಗಿಯೇ ಬೇಕು ಎಂದು ಹುಡುಕುತ್ತಿದ್ದ ಚಿತ್ರತಂಡ ಕಾವ್ಯಾ ಅವರನ್ನು ಅಂತಿಮವಾಗಿ ಆರಿಸಿದೆ. ಸಾಯಿಕುಮಾರ್, ಪವಿತ್ರಾ ಲೋಕೇಶ್, ಸಾಧು ಕೋಕಿಲ, ಸಿಹಿಕಹಿ ಚಂದ್ರು, ಸಿತಾರಾ ಹಾಗೂ ಸುಚೇಂದ್ರ ಪ್ರಸಾದ್ ತಾರಾಗಣದಲ್ಲಿರುವ ಪ್ರಮುಖರು. ಮೋಹನ್ ಛಾಯಾಗ್ರಹಣ, ಅವಿನಾಶ್ ಸಂಗೀತ ಇರುವ ಈ ಚಿತ್ರದ ಬಹುತೇಕ ಶೂಟಿಂಗ್ ಗೋವಾ ಮತ್ತು ಬೆಂಗಳೂರಿನಲ್ಲಿ ನಡೆದಿದೆ.



# ರಾಮಕ್ಕನ ಪಯಣ

ಪ್ರಾದೇಶಿಕ ಚಿತ್ರ ವಿಭಾಗದಲ್ಲಿ ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿ ಪಡೆದಿರುವ ‘ಹೆಬ್ಬೆಟ್ ರಾಮಕ್ಕ’ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಏ. 27ರಂದು ತೆರೆಗೆ). ಗ್ರಾಮೀಣ ಸೊಗಡನ್ನು ಹಾಗೂ ಅಲ್ಲಿನ ತವಕತಲ್ಲಣಗಳನ್ನು ತೆರೆಗೆ ತರುವುದರಲ್ಲಿ ಪ್ರಸಿದ್ಧರಾದ ನಂಜುಂಡೇಗೌಡರು ನಿರ್ದೇಶಿಸಿರುವ ಚಿತ್ರವಿದು.

ಅನಕ್ಷರಸ್ಥ ಮಹಿಳೆಯಾದ ರಾಮಕ್ಕನ ಕಥೆ ಜಾಗತಿಕವಾದುದು ಎನ್ನುವುದು ನಿರ್ದೇಶಕರ ವಿಶ್ವಾಸ. ರಾಜಕಾರಣದಲ್ಲಿನ ಮಹಿಳಾ ಮೀಸಲಾತಿ ದುರಪಯೋಗ ಆಗುತ್ತಿರುವುದನ್ನು ನಿರ್ದೇಶಕರು ಚಿತ್ರದಲ್ಲಿ ವಿಡಂಬಿಸಿದ್ದಾರಂತೆ. ವರ್ತಮಾನದ ಹಲವು ಸಂಗತಿಗಳನ್ನು ನೆನಪಿಸುವಂತೆ ಇರುವ ರಾಮಕ್ಕನ ಕಥೆ, ರಾಜಕಾರಣದಲ್ಲಿ ಮಹಿಳೆ ಸಕ್ರಿಯವಾಗಿ ತೊಡಗಿಕೊಳ್ಳುವ ಅಗತ್ಯವನ್ನು ಆಶಯವನ್ನಾಗಿ ಹೊಂದಿದೆ.

ನಟಿ ತಾರಾ ರಾಮಕ್ಕನ ಪಾತ್ರದಲ್ಲಿ ನಟಿಸಿದ್ದಾರೆ. ದೇವರಾಜ್, ನಾಗರಾಜಮೂರ್ತಿ, ಸಿಂಧು ಕಾನೇನಹಳ್ಳಿ ಹಾಗೂ ಸುರೇಶ್ ತಾರಾಗಣದಲ್ಲಿರುವ ಪ್ರಮುಖರು. ಬಿ. ಸತೀಶ್ ಛಾಯಾಗ್ರಹಣ ಹಾಗೂ ಪೂರ್ಣಚಂದ್ರ ತೇಜಸ್ವಿ ಸಂಗೀತ ಚಿತ್ರಕ್ಕಿದೆ. ರಾಷ್ಟ್ರಪ್ರಶಸ್ತಿ ಸಂಭ್ರಮದಲ್ಲಿರುವ ಚಿತ್ರತಂಡ ಏ. 27ರಂದು ರಾಮಕ್ಕನನ್ನು ತೆರೆಕಾಣಿಸುವ ತವಕದಲ್ಲಿದ್ದಾರೆ. ಕವಿ ಎಸ್.ಜಿ. ಸಿದ್ಧರಾಮಯ್ಯ ಸಂಭಾಷಣೆ ಬರೆದಿರುವುದು ಚಿತ್ರದ ಮತ್ತೊಂದು ವಿಶೇಷ.

■ ರಘು